# ಹುಷಾರ್ ಸೈಬರ್ ವಾರ್ ಜಾರಿಯಲ್ಲಿದೆ!

ಸೈಬರ್ ವಾರ್

ಈ ಜಗತ್ತನ್ನು ಬಾಧಿಸುತ್ತಿರುವ ಬಹುದೊಡ್ಡ ಆತಂಕ ಯಾವುದು? ಕಪ್ಪುಹಣ, ಭ್ರಷ್ಟ ರಾಜಕಾರಣ, ಅಣ್ವಸ್ತ್ರ, ಕೊರೊನಾ – ಹೀಗೆ ಹಲವು ವಿಷಯಗಳನ್ನು ಪಟ್ಟಿ ಮಾಡಬಹುದು. ಇವೆಲ್ಲ ಸಂಗತಿಗಳನ್ನು ಮೀರಿದ ಅಥವಾ ಇವೆಲ್ಲವುಗಳನ್ನೂ ಯಾವುದೋ ಒಂದು ರೀತಿಯಲ್ಲಿ ಒಳಗೊಂಡ ಮತ್ತೊಂದು ವಿಷಯವಿದೆ – ಅದು ಸೈಬರ್ ವಾರ್! ನಮ್ಮ ಅನುದಿನದ ಅನೇಕ ಚಟುವಟಿಕೆಗಳು 'ಡಿಜಿಟಲ್' ಆಗಿರುವ ಸಂದರ್ಭವಂತೂ ಅಂತರ್ಜಾಲದಲ್ಲಿನ ವಿಷಜೇಡಗಳಿಗೆ ಸಾಕಷ್ಟು ಆಹಾರ ಒದಗಿಸಿದೆ. ದೂರದ ಕೋಣೆಯೊಂದರಲ್ಲಿ ಕುಳಿತುಕೊಂಡೇ ಯಾವುದೋ ದೇಶದಲ್ಲಿ ಅಲ್ಲೋಲಕಲ್ಲೋಲ ಉಂಟು ಮಾಡಬಲ್ಲ ಸಾಮರ್ಥ್ಯದ ಸೈಬರ್ ಚೋರರು ವೈಯಕ್ತಿಕ ಜೀವನದಿಂದ ಹಿಡಿದು ಅಂತರರಾಷ್ಟ್ರೀಯ ವಿದ್ಯಮಾನಗಳನ್ನೂ ತಲೆಕೆಳಗು ಮಾಡಬಲ್ಲರು. ದೇಶಗಳು ಮುಖಾಮುಖಿ ಬಡಿದಾಡಿಕೊಳ್ಳುವ ಸಾಧ್ಯತೆಗಳೀಗ ಕಡಿಮೆ. ಈಗಿರುವುದು ಸೈಬರ್ ವಾರ್ ಟ್ರೆಂಡ್.

■ ಚೈತ್ರಿಕಾ ನಾಯ್ಕ ಹರ್ಗಿ

